ಕೈಗೊಳ್ಳುವುದೇ ಈ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಈ) ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ವೈಯಕ್ತಿಕ ಕೊಳವೆ ಬಾವಿಗಳಿಗೆ ಅಭಿವೃದ್ಧಿ ನಿಗಮದಿಂದ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸದೇ ಇರುವ ಬಾವಿಗಳ ಸಂಖ್ಯೆ ಎಷ್ಟು?

ಉ) ಎಂದಿನಿಂದ ಈ ಬಾವಿಗಳ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಲಾಗಿಲ್ಲ; ಅದಕ್ಕೆ ಕಾರಣಗಳೇನು?

ಊ) ಸದರಿ ವರ್ಗದವರಿಗೆ ಅದರಿಂದ ಆಗುವ ಅನಾನುಕೂಲತೆ ತಪ್ಪಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಸಿಂಧಗಿ ಮತ ಕ್ಷೇತ್ರದಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ವೈಯಕ್ತಿಕ ನೀರಾವರಿ ಯೋಜನೆಯಡಿ ಯಾವುದೇ ಕೊಳವೆಬಾವಿಯನ್ನು ಕೊರೆದಿರುವುದಿಲ್ಲ.

ಆ) ಇಲ್ಲ.

ಇ) ಈ ಯೋಜನೆಯು ಈಗಾಗಲೇ ಜಾರಿಯಲ್ಲಿದೆ.

ಈ) ಈ ಯೋಜನೆಯಡಿ ಸಿಂಧಗಿ ಮತ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸದೇ ಇರುವ ಬಾವಿಗಳ ಒಟ್ಟು ಸಂಖ್ಯೆ: 53.

ಉ ಮತ್ತು ಊ) 1997-98ನೇ ಸಾಲಿನಿಂದ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಲಾಗಿಲ್ಲ. ನಿಗಮದ ವತಿಯಿಂದ ಕೆ.ಪಿ.ಟಿ. ಸಿ.ಎಲ್.ನಲ್ಲಿ ಹೆಸರುಗಳನ್ನು ನೊಂದಾಯಿಸಿದೆ. ಆದರೆ ವಿದ್ಯುತ್ ಪ್ರಸರಣ ನಿಗಮವು ವಿದ್ಯುದ್ದೀಕರಿಸಿಲ್ಲ ಜನವರಿ 2000ರಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ವಿದ್ಯುತ್ ಪ್ರಸರಣ ನಿಗಮವು ತ್ವರಿತವಾಗಿ ವಿದ್ಯುತ್ ಸೌಲಭ್ಯ ನೀಡಲು ಒಪ್ಪಿದ್ದು ಕೆಲಸವನ್ನು ತ್ವರಿತವಾಗಿ ಮುಗಿಸಲಾಗುವುದು.

ತುಮಕೂರು ನಗರಸಭೆಯಲ್ಲಿರುವ ಖಾತೆಗಳು.

2440(೧೯೨೯)

ಶ್ರೀ ಶಿವಣ್ಣ ಎಸ್. (ತುಮಕೂರು): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರ ಸಭೆಯಲ್ಲಿರುವ ಒಟ್ಟು ಖಾತೆ ಎಷ್ಟು;

ಆ) ಈ ಖಾತೆಗಳ ಮುಖೇನ ೧೯೯೬-೯೭ನೇ ಸಾಲಿನಿಂದ ೩೧-೧೨-೧೯೯೯ ರವರೆಗೆ ನಿಗದಿಯಾಗಿದ್ದ ಕಂದಾಯ ಹಾಗೂ ತೆರಿಗೆಗಳ ಗುರಿ ಎಷ್ಟು. ಹಾಗೂ ವಸೂಲಾದ ಹಣವೆಷ್ಟು? (ವರ್ಷವಾರು ಮಾಹಿತಿ ನೀಡುವುದು).

ಇ) ವಸೂಲಾದ ಕಂದಾಯದ ಮೊಬಲಗಿನಲ್ಲಿ ಸರ್ಕಾರಕ್ಕೆ ಪಾವತಿಯಾಗಬೇಕಾದ ತೆರಿಗೆಗಳು, ನೀರಿನ ತೆರಿಗೆ, ವಿದ್ಯುಚ್ಛಕ್ತಿ ತೆರಿಗೆ ಇವುಗಳು ಆಯಾಯ ಶೀರ್ಷಿಕೆಗೆ ಜಮಾವಾಗುತ್ತಿದೆಯೆ; ಹಾಗಿದ್ದಲ್ಲಿ ವರ್ಷವಾರು ಮಾಹಿತಿ ನೀಡುವುದು.

ಶ್ರೀ ಎಂ.ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ತುಮಕೂರು ನಗರಸಭೆಯಲ್ಲಿರುವ ಒಟ್ಟು ಖಾತೆಗಳ ಸಂಖ್ಯೆ ೪೮,೫೯೯.

ಆ) ಈ ಖಾತೆಗಳಿಂದ ೯೬-೯೭ನೇ ಸಾಲಿನಿಂದ ೩೧-೧೨-೯೯ರವರೆಗೆ ನಿಗದಿಯಾದ ಕಂದಾಯ ಹಾಗೂ ತೆರಿಗೆಗಳ ಗುರಿ ಹಾಗೂ ವಸೂಲಿ ಹಣ ಈ ಕೆಳಕಂಡಂತಿದೆ.

ವರ್ಷ	ನಿಗಧಿಯಾದ ಕಂದಾಯ ಹಾಗೂ ತೆರಿಗೆಗಳ ಗುರಿ (ಬಾಕಿ ಸೇರಿ)	ವಸೂಲಿಯಾದ ಹಣ
೯೬-೯೭	೧,೯೬.೭೧.೯೧೦	೧,೫೦,೦೯,೪೮೬
೯೭-೯೮	೧,೯೮,೯೩,೬೦೯	೧,೭೭,೬೧,೬೮೬
೯೮-೯೯	೧,೮೬,೯೫,೬೭೩	೧,೭೩,೭೪,೨೪೦
೯೯-೨೦೦೦	೨,೪೧,೨೩,೩೭೬	೧,೨೭,೪೧,೬೯೫

ಇ)

ತೆರಿಗೆ ವಿವರ	ವಸೂಲಿ	ಜಮಾ	ಲೆಕ್ಕ ಶೀರ್ಷಿಕೆ
೯೬-೯೭:			
ವಿದ್ಯಾಭ್ಯಾಸ ಕರ	೪,೫೭,೮೦೬	-	೦೨೦೨

ಆರೋಗ್ಯ ಕರ	೬,೮೩,೦೪೫	-	೦೨೧೦
ಲೈಬ್ರರಿ ಕರ	೨,೭೮,೩೪೨	೧೪,೨೪೦	ಜಿಲ್ಲಾ ಗ್ರಂಥಾಲಯ ೧೨೯೫೬
೯೭-೯೮:			
ವಿದ್ಯಾಭ್ಯಾಸ ಕರ	೪,೮೨,೦೦೦	-	೦೨೦೨
ಆರೋಗ್ಯಕರ	೬,೯೯,೭೦೦	-	೦೨೧೦
ಲೈಬ್ರರಿ ಕರ	೨,೮೮,೦೦೦	೧,೦೬,೬೫೦	ಜಿಲ್ಲಾ ಗಂಥಾಲಯ ೧೨೯೫೬
೯೮-೯೯:			
ವಿದ್ಯಾಭ್ಯಾಸ ಕರ	೭,೯೫,೦೦೦	೧,೦೫,೫೭೦	೦೨೦೨
ಆರೋಗ್ಯಕರ	೧೦,೮೪,೧೯೦	೧,೪೯,೪೨೦	೦೨೧೦
ಲೈಬ್ರರಿ ಕರ	೨,೯೬,೬೦೦	೧,೫೦,೦೮೦	೧೨೯೫೬ ಎಸ್. ಬಿ. ಖಾತೆ
೯೯-೨೦೦೦			
ವಿದ್ಯಾಭ್ಯಾಸ ಕರ	೪,೦೭,೧೭೦	-	೦೨೦೨
ಆರೋಗ್ಯಕರ	೫,೨೦,೩೪೦	-	-
ಲೈಬ್ರರಿ ಕರ	೨,೪೯,೫೧೦	೧,೩೨,೮೦೦	೧೯೯೫೬

ವಿದ್ಯುತ್ ಕರ ವಸೂಲಿ ಮಾಡುತ್ತಿದ್ದು, ನಗರಸಭೆಯಲ್ಲಿ ದೀಪಗಳ ನಿರ್ವಹಣೆಗೆ ಬಳಸಲಾಗುತ್ತಿದೆ.

ನೀರಿನ ಕರವನ್ನು ಸರ್ಕಾರದ ಆದೇಶದಂತೆ ಎಸ್. ಬಿ. ಎಂ. ನಲ್ಲಿ ಪ್ರತ್ಯೇಕವಾದ ಉಳಿತಾಯ ಖಾತೆ ತೆರೆದು ಜಮಾ ಮಾಡಲಾಗುತ್ತಿದೆ.